# ಅಮೀರ್ ಸಸ್ಪೆನ್ಸ್



ಸಾಮಾನ್ಯವಾಗಿ ತಮ್ಮ ಹೊಸ ಚಿತ್ರ ಬಿಡುಗಡೆಗೆ ಮುನ್ನ ಅಮೀರ್‌ಖಾನ್ ವ್ಯಾಪಕ ಪ್ರಚಾರದಲ್ಲಿ ತೊಡಗುತ್ತಾರೆ. ಆದರೆ ಇನ್ನೇನು ಬಿಡುಗಡೆಯಾಗಲಿರುವ 'ತಲಾಶ್' ಪ್ರಚಾರದಲ್ಲಿ ಅಮೀರ್ ಹೆಚ್ಚಾಗಿ ಕಾಣಿಸಿಕೊಳ್ಳಲೇ ಇಲ್ಲ. ಟೀವಿ ಸೀರಿಯಲ್ ಒಂದರಲ್ಲಿ ಚಿತ್ರದ ಪ್ರಚಾರಕ್ಕೆ ಬಂದದ್ದು (ಅದೂ ತಡವಾಗಿ) ಬಿಟ್ಟರೆ 'ತಲಾಶ್' ಕುರಿತು ಅಮೀರ್ ಹೆಚ್ಚು ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ.

ಪೊಲೀಸ್ ಅಧಿಕಾರಿ, ಆತನ ಪತ್ನಿ ಮತ್ತು ಒಬ್ಬ ವೇಶ್ಯೆ– ಹೀಗೆ ಮೂರು ಪ್ರಮುಖ ಪಾತ್ರಗಳಿರುವ ಈ ಸಸ್ಪೆನ್ಸ್ ಚಿತ್ರ ಈಗಾಗಲೆ ಎಲ್ಲೆಡೆ ಕುತೂಹಲ ಮೂಡಿಸಿದೆ. ಕಳೆದ ಒಂದು ತಿಂಗಳಿಂದ ಅಂತರ್ಜಾಲದಲ್ಲಿ ಸಿಗುತ್ತಿರುವ ಚಿತ್ರದ ಟ್ರೈಲರ್‌ಗಳು ಕೂಡಾ ಚಿತ್ರದ ಬಗ್ಗೆ ಅತೀವ ಕುತೂಹಲ ಹುಟ್ಟಿಸುವಂತೆಯೇ ಇವೆ. ವೇಶ್ಯೆಯ ಪಾತ್ರದಲ್ಲಿ ಕರೀನಾ ಅದ್ಭುತವಾಗಿ ನಟಿಸಿದ್ದಾಳೆ ಎನ್ನುವ ಮಾತುಗಳೂ ಬಾಲಿವುಡ್‌ನಲ್ಲಿ ಹರಿದಾಡುತ್ತಿವೆ. ಅಮೀರ್ ಜತೆಗೆ ರಾಣಿ ಮುಖರ್ಜಿ ನಟಿಸಿರುವುದು ಕೂಡಾ ಚಿತ್ರದ ಬಗ್ಗೆ ನಿರೀಕ್ಷೆಗಳ ಗರಿಕೆದರಿಸಿದೆ.

ಆದರೆ ಅಮೀರ್ ಈ ಚಿತ್ರದ ಪ್ರಚಾರಕ್ಕೆ ಗಮನ ಹರಿಸಿಲ್ಲ ಎನ್ನುವುದನ್ನು ಕರೀನಾ ಅಲ್ಲಗಳೆದಿದ್ದಾಳೆ. "ಅಮೀರ್ ನಟಿಸಿದ್ದಾರೆ ಎನ್ನುವುದೇ ಈ ಚಿತ್ರದ ಪ್ರಚಾರಕ್ಕೆ ಬಲ ನೀಡಿದೆ. ಚಿತ್ರದ ಬಗ್ಗೆ ಅಮೀರ್ ಏನೂ ಹೇಳುತ್ತಿಲ್ಲ ಎಂದರೆ ಜನರ ಕುತೂಹಲ ಇನ್ನಷ್ಟು ಹೆಚ್ಚುತ್ತದೆ. ಇದೂ ಒಂದು ರೀತಿಯ ಪ್ರಚಾರವೇ. ಯಾವುದೇ ಚಿತ್ರಕ್ಕೆ ಅಮೀರ್ ಹೆಸರಿದ್ದರೂ ಸಾಕು, ಅದು ಚೆನ್ನಾಗಿ ಓಡುತ್ತದೆ" ಎನ್ನುವುದು ಕರೀನಾ ವಾದ!

ರೀಮಾ ಕಾಗ್ಟಿ ನಿರ್ದೇಶನದ ಈ ಚಿತ್ರಕ್ಕೆ ಇನ್ನೊಬ್ಬ ಪ್ರತಿಭಾವಂತ ನಿರ್ದೇಶಕಿ ಜೋಯ ಅಖ್ತರ್ ಚಿತ್ರಕಥೆಯನ್ನು ಜಂಟಿಯಾಗಿ ಬರೆದಿದ್ದಾರೆ. ಆದರೆ ಅಮೀರ್ ತಮ್ಮ ಈ ಹಿಂದಿನ ಚಿತ್ರಗಳಂತೆ ಈ ಚಿತ್ರದ ಪ್ರಚಾರದಲ್ಲಿ ಹೆಚ್ಚು ಉತ್ಸಾಹದಿಂದ ಏಕೆ ಪಾಲ್ಗೊಂಡಿಲ್ಲ ಎನ್ನುವುದು ಮಾತ್ರ ಸಸ್ಪೆನ್ಸ್ ಆಗಿಯೇ ಉಳಿದಿದೆ.

■ ಬಿಂದು




A Group Of Sudarshan Silks & Sudarshan Jewellery, Chickpet & Sheshadripuram.

Sudarshan
FAMILY STORE
Since 1944

Kanjeevarams | Designers | Mens Wear | Womens Wear | Kids Wear | Jewellers | Accessories | Food Court

Newly Opened at Chickpet - Bengaluru.

231, Chickpet, Bengaluru - 53. Ph: 080 - 41300300.
(Opposite Syndicate Bank).